ಈ ಯೋಜನೆಗೆ ಆಯವ್ಯಯದಲ್ಲಿನ ಹಣಕಾಸಿನ ಅವಕಾಶದಂತೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

ಬೀದರ್ ಜಿಲ್ಲೆಯಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು

29 (18) ಶ್ರೀ ರಹೀಂಖಾನ್ (ಬೀದರ್) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಎಷ್ಟು ಭಾರಿ ಮತ್ತು ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸಲು ಉದ್ಯಮಿಗಳು ಮುಂದೆ ಬಂದಿದ್ದಾರೆ (ಪೂರ್ಣ ಮಾಹಿತಿ ಒದಗಿಸುವುದು);

ಆ) ಸದರಿ ಅವಧಿಯಲ್ಲಿ ಇಲಾಖೆಯಿಂದ ಜಿಲ್ಲೆಯಲ್ಲಿ ಯಾವ ಯಾವ ಕಾರ್ಯಗಳಿಗೆ ಎಷ್ಟೆಷ್ಟು ಹಣವನ್ನು ವೆಚ್ಚ ಮಾಡಲಾಗಿದೆ. (ವಿವರ ಒದಗಿಸುವುದು);

ಇ) ಬೀದರ್(ಉ) ವಿಧಾನಸಭಾ ಕ್ಷೇತ್ರದಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಭೂ ಸ್ವಾಧೀನಪಡಿಸಿಕೊಂಡು ಕೈಗಾರಿಕೆಗಳನ್ನು ಉತ್ತೇಜಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ. (ಪೂರ್ಣ ವಿವರಗಳನ್ನು ಒದಗಿಸುವುದು);

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ 2008–09 ರಿಂದ 2010–11 ರವರೆಗೆ ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿ (ರೂ.50 ಕೋಟಿಗಿಂತ ಹೆಚ್ಚು) 6 ಯೋಜನಾ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಿದ್ದು ಇದರಿಂದ ರೂ. 3812.30 ಕೋಟಿ ಬಂಡವಾಳ ಹೂಡಿಕೆಗಾಗಿ, ಸುಮಾರು 10515 ಜನರಿಗೆ ಉದ್ಯೋಗಾವಕಾಶ ದೊರಕಲಿದೆ. ವಿವರವನ್ನು ಅನುಬಂಧ–1 ರಲ್ಲಿ ನೀಡಿದೆ.

ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ (ರೂ.3 ಕೋಟಿಯಿಂದ ರೂ.50 ಕೋಟಿಯವರೆಗೆ) 63 ಯೋಜನಾ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಿದ್ದು ಇದರಿಂದ ರೂ.361.05 ಕೋಟಿ ಬಂಡವಾಳ ಹೂಡಿಕೆಯಾಗಿ, ಸುಮಾರು 4557

ಜನರಿಗೆ ಉದ್ಯೋಗಾವಕಾಶ ದೊರಕಲಿದೆ. ವಿವರವನ್ನು ಅನುಬಂಧ–2 ರಲ್ಲಿ ನೀಡಿದೆ.

ಆ)

1) ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯ ಅಭಿವೃದ್ಧಿ:

2009–10ನೇ ಸಾಲಿನಲ್ಲಿ ಐಐಡಿ ಯೋಜನೆಯಡಿ ಬೀದರ್ ಜಿಲ್ಲೆಯ ಬಸವ ಕಲ್ಯಾಣ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯವನ್ನು ಅಭಿವೃದ್ಧಿ ಪಡಿಸಲು ರೂ.30.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

2010–11ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲ್ಲೂಕಿನಲ್ಲಿ ಕೈಗಾರಿಕಾ ವಸಾಹತುವಿನ ಸ್ಥಾಪನೆ/ಅಭಿವೃದ್ಧಿಗಾಗಿ ರೂ.60.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

2) ಬಂಡವಾಳ ಹೂಡಿಕೆ ಸಹಾಯಧನ ಬಿಡುಗಡೆ:

ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯ ಸಣ್ಣ ಮತ್ತು ಅತೀ ಸಣ್ಣ 127 ಕೈಗಾರಿಕಾ ಘಟಕಗಳಿಗೆ ರೂ.1.61 ಕೋಟಿ ಬಂಡವಾಳ ಸಹಾಯ ಧನವನ್ನು ಬಿಡುಗಡೆಗೊಳಿಸಲಾಗಿದೆ.

3) ಪರಿಶಿಷ್ಟ ಜಾತಿ/ಪಂಗಡದ ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ.

ಕಳೆದ 3 ವರ್ಷಗಳಲ್ಲಿ ಬೀದರ್ ಜಿಲ್ಲೆಗೆ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಒಟ್ಟು 121 ವಸತಿ ಕಾರ್ಯಾಗಾರ ನಿರ್ಮಾಣಕ್ಕಾಗಿ ರೂ.56.34 ಲಕ್ಷಗಳನ್ನು ಈ ಕೆಳಕಂಡಂತೆ ಬಿಡುಗಡೆ ಮಾಡಲಾಗಿದೆ.

(ರೂ. ಲಕ್ಷಗಳಲ್ಲಿ)

ವರ್ಷ	ಯೋಜನೆ	ಭೌತಿಕ	ಆರ್ಥಿಕ
2008–09	ವಿ.ಘ.ಯೋ	25	6.0
	ಗಿ.ಉ.ಯೋ	05	1.20
2009–10	ವಿ.ಘ.ಯೋ	30	16.20
	ಗಿ.ಉ.ಯೋ	16	8.64
2010–11	ವಿ.ಘ.ಯೋ	36	19.44
	ಗಿ.ಉ.ಯೋ	09	4.86

4) ಅಧ್ಯಯನ, ವಿಚಾರ ಸಂಕಿರಣ ತರಬೇತಿ, ಗಣಕೀಕರಣ, ಮತ್ತು ತಂತ್ರಜ್ಞಾನ ಆಧುನೀಕರಣ ಸಲುವಾಗಿ ಬಿಡುಗಡೆ ಮಾಡಿದ ಅನುದಾನ

2009–10	ರೂ. 1.35 ಲಕ್ಷ
2010–11	ರೂ. 0.35 ಲಕ್ಷ
2011–12	ರೂ. 1.40 ಲಕ್ಷ

5) ಸದರಿ ಅವಧಿಯಲ್ಲಿ ಕೆ.ಐ.ಎ.ಡಿ.ಬಿ ವತಿಯಿಂದ ಬೀದರ್ ಜಿಲ್ಲೆಯಲ್ಲಿ ಸುಮಾರು ರೂ.138.63 ಲಕ್ಷಗಳನ್ನು ಮೂಲಭೂತ ಸೌಕರ್ಯಗಳನ್ನು ಉನ್ನತ ದರ್ಜೆಗೇರಿಸುವ ಕಾಮಗಾರಿಗಳಿಗೆ ಹಾಗೂ ರಸ್ತೆ ಕಾಮಗಾರಿಗಳಿಗೆ ವೆಚ್ಚ ಮಾಡಲಾಗಿದೆ.

ಇ) ಕಳೆದ ಮೂರು ವರ್ಷಗಳಿಂದ ಬೀದರ್(ಉ) ವಿಧಾನ ಸಭಾ ಕ್ಷೇತ್ರದಲ್ಲಿ ಕೆ.ಐ.ಎ.ಡಿ.ಬಿ ವತಿಯಿಂದ ಯಾವುದೇ ಭೂ ಸ್ವಾಧೀನಪಡಿಸಿಕೊಂಡಿರುವುದಿಲ್ಲ. ಆದರೆ ಕೈಗಾರಿಕಾ ನೀತಿ 2009–14 ರ ಅನ್ವಯ ಕೈಗಾರಿಕೆಗಳನ್ನು ಉತ್ತೇಜಿಸಲು ಸರ್ಕಾರ ಕ್ರಮಗಳನ್ನು ಕೈಗೊಂಡಿದೆ.

ANNEXURE - 1

Sl. No.	Company Name	Plot No.	Extent (in acres)	Date of Allotment
1	2	3	4	5
Humnabad Industrial Area				
LARGE SCALE INDUSTRIES				
1	Reliance Industries Ltd.,	51/2, 52, 52/B, 54-A, 54-B, 55/1, 55/2, 56/A, 56/B, 77/A1, A2, A3, 79/A, 80/A, 51/1, 54/C, 56/B, 56/C, 57/A1, A2, B1, B2	195.29	24.08.2010
MEDIUM SCALE INDUSTRIES				
2	Karnataka Paper Industries.,	97-P1	6.00	09.06.2009
3	Himalaya Steels,	100-P1	3.00	09.06.2009
4	Ishwar Industries.,	92-P & 93	2.50	21.05.2009
5	GOVT ITI	137 to 141 to 144 & 153 to 156	5.00	20.06.2009
6	Karnaja Steels	82	3.00	07.10.209
7	Omkar Mine Industries	68	2.00	18.2.2009
8	Banashankari Garments	16-P2	2.00	02.01.2010
9	Ketaki Sangameshwar	16-P1	2.00	02.01.2010
10	Patil Spun Pipe Industries	93-P	2.00	17.03.2010
11	Pioneers Steel Industries	80	2.00	29.03.2010
12	Somesh Enterprises	91-P	2.00	04.06.2010
13	Hy-gro Pharmatech	90	5.00	01.07.2010
14	Jai Bhavani Activated Earth	95	2.50	30.01.2010
15	Dhanalakshmi Paper Industries.,	99-P	3.00	17.06.2010

16	Vasista Life Science (P) Ltd.,	91-P2	4.00	06.07.2010
17	Vinoothan Pharma Labs (P) Ltd.,	98-A	4.00	21.07.2010
18	Sahithi Drugs & Intermedetes (P) Ltd.,	108-B & 109	4.00	27.07.2010
19	Monath Life Science (P) Ltd.,	100-P2	4.00	21.07.2010
20	Sri Sai Lab Uma Laboratories	100-P3	3.00	27.07.2010
21	Virupaksha Organic (P) Ltd.,	171 to 174 & 168	8.00	17.08.2010
22	M/s. Veerabhadreshwara Dall Industries	93-P	2.00	05.02.2010
23	AL Sana Agro	96-P & 97-P	4.00	12.05.2010
24	Bhoomi Concrete Products	19	2.00	03.08.2010
25	GPR Life Science (P) Ltd.,	66-E & F	2.00	30.03.2011
		Total	**274.29 Acres**	

Kolhar Industrial Area				
MEDIUM SCALE INDUSTRIES				
1	Prime Industries	267	1.50	03.04.2009
2	Sri Siddeshwara Industry	213, 214 & 215	3.00	22.07.2009
3	Nandini Agro	218 & 219	2.00	16.07.2009
4	Kiran Agro	294& 295	3.00	09.07.2009
5	MYRADA Training Centre	195	3.00	22.10.2009
6	New Bhawani Dall Industry	102-P & 103-A	3.00	07.09.2009
7	Narendra Dall Industry	224, 226 & 227	2.00	08.09.2009
8	Siddeshwara Dall Industry	Sy. No. 21/2	3.00	03.09.2009
9	Siddeshwara Dall Mill	Sy. No. 21/2	3.00	03.09.2009
10	Tulaja Bhavani Industry	Sy. No. 21/2	3.00	03.09.2009
11	Jagadamba Dall Industry	Sy. No. 21/2	3.00	03.09.2009
12	Rohit Stuff actants (P) Ltd.,	Sy. No. 21/1/4, 21/1/B & 21/2A	15.00	07.01.2010
13	Vijayalakshmi Industries	297	2.00	16.01.2010
14	Kashi Mineral Water	296-P	3.00	22.01.2010
15	M.S. Patil Sall Industries	Sy. No. 21/2	2.00	22.01.2010
16	V.S. Patil Dall Industries	Sy. No. 21/2	2.00	22.01.2010
17	Manek Prabhu Inustries	76 & 5-P	2.00	15.09.2009
18	Anush Dall Industries	336	2.00	03.02.2010
19	Karnaja Dall Industry	337	3.00	03.02.2010
20	Talampally Dall Mill	306	2.00	17.03.2010
21	Talampally Rice Mill	307	2.00	17.03.2010
22	Balaji Earths	184 & 185	5.00	22.03.2010
23	Karataka Ware Housing	191, 192, 193 & 194	10.00	25.03.2010

24	Patil Spun Pipes Industries	250	2.00	20.04.2010
25	Shivanand Dall Mill	332 & 333	2.00	26.05.2010
26	Sree Shivalingeshwar Surgical Centre	194	3.00	21.06.2010
27	Sree Basaveshwara Dal Industries	134-P1	2.00	04.09.2010
		Total	**88.50 Acres**	

ಅನುಬಂಧ – 2

ಕ್ರ. ಸಂ.	ಕೈಗಾರಿಕಾ ಪ್ರದೇಶದ ಹೆಸರು	ಕಾಮಗಾರಿ	ವೆಚ್ಚ ಮಾಡಿದ ಮೊಬಲಗು (ಲಕ್ಷಗಳಲ್ಲಿ)
1	2	3	4
1)	ಬಸವ ಕಲ್ಯಾಣ ಕೈಗಾರಿಕಾ ಪ್ರದೇಶ	ಮೂಲಭೂತ ಸೌಕರ್ಯಗಳಾದ ರಸ್ತೆ, ನೀರು, ವಿದ್ಯುತ್ ಮುಂತಾದವುಗಳು ಉನ್ನತ ದರ್ಜೆಗೇರಿಸುವ ಕಾಮಗಾರಿ.	14.66
2)	ಹುಮನಬಾದ್ ಕೈಗಾರಿಕಾ ಪ್ರದೇಶ	ಮೂಲಭೂತ ಸೌಕರ್ಯಗಳಾದ ರಸ್ತೆ, ನೀರು, ವಿದ್ಯುತ್ ಮುಂತಾದವುಗಳು ಉನ್ನತ ದರ್ಜೆಗೇರಿಸುವ ಕಾಮಗಾರಿ.	33.98
3)	ಕೊಲ್ ಹಾರ್ ಕೈಗಾರಿಕಾ ಪ್ರದೇಶ	ಮೂಲಭೂತ ಸೌಕರ್ಯಗಳಾದ ರಸ್ತೆ, ನೀರು, ವಿದ್ಯುತ್ ಮುಂತಾದವುಗಳು ಉನ್ನತ ದರ್ಜೆಗೇರಿಸುವ ಕಾಮಗಾರಿ.	51.45
4)	ನೌಬಾದ್ ಕೈಗಾರಿಕಾ ಪ್ರದೇಶ	ಮೂಲಭೂತ ಸೌಕರ್ಯಗಳಾದ ರಸ್ತೆ, ನೀರು, ವಿದ್ಯುತ್ ಮುಂತಾದವುಗಳು ಉನ್ನತ ದರ್ಜೆಗೇರಿಸುವ ಕಾಮಗಾರಿ.	13.25
5)	ನೌಬಾದ್ ಹೌಸಿಂಗ್ ಕಾಲೋನಿ.	ರಸ್ತೆ ಕಾಮಗಾರಿಗಳು	25.29
		ಒಟ್ಟು ರೂ.	**138.63**